# ಕರ್ನಾಟಕ ಗೃಹ ಮಂಡಳಿ

ನಂ. 104, ಹೆಚ್.ಬಿ.–2, ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಸೂರ್ಯನಗರ ಸಮನ್ವಯ ಕಛೇರಿ–1, ಆನೇಕಲ್ ಮುಖ್ಯ ರಸ್ತೆ, ಬೆಂಗಳೂರು–81

ಸಂಖ್ಯೆ: ಕಗೃಮಂ/ಕಾ.ಅ/ಸಕಾಅ/ಸೂ.ನ/ಸೂರ್ಯನಗರ/ಗ್ರೂಪ್ ಹೌಸಿಂಗ್/1268/2019–2020 ದಿನಾಂಕ: 19.02.2020

## ಬೇಡಿಕೆ ಸಮೀಕ್ಷೆ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಹಿನ್ನಕ್ಕಿ, ಮರಸೂರು, ಲಿಂಗಾಪುರ ಗ್ರಾಮಗಳಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳೊಂದಿಗೆ ಅಭಿವೃದ್ಧಿ ಪಡಿಸಿರುವ ಸೂರ್ಯನಗರ 2ನೇ ಹಂತ ವಸತಿ ಬಡಾವಣೆಯಲ್ಲಿ ಗುಂಪು ಮನೆ ಯೋಜನೆಗಾಗಿ ಮೀಸಲಿಡಲಾದ ನಿವೇಶನ ಸಂಖ್ಯೆ: 3584 ಸೆಕ್ಟರ್ 'ಎ' ರಲ್ಲಿನ 17500 ಚ.ಮೀ. ವಿಸ್ತೀರ್ಣ ಹೊಂದಿರುವ ನಿವೇಶನದಲ್ಲಿ ಸಮೂಹ ಬಹುಮಹಡಿ ವಸತಿ ಯೋಜನೆ (Group Housing (G+3)) ಕೈಗೊಳ್ಳಲು ಉದ್ದೇಶಿಸಿ ಬೇಡಿಕೆ ಸಮೀಕ್ಷೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿವರಗಳು ಈ ಕೆಳಕಂಡಂತೆ ಇರುತ್ತವೆ.

ಆಸಕ್ತಿಯುಳ್ಳ ಸಾರ್ವಜನಿಕರು ಅರ್ಜಿಗಳನ್ನು ಅರ್ಜಿ ಶುಲ್ಕ ರೂ. 100/– ಗಳನ್ನು ಪಾವತಿ ಮಾಡಿ, ಈ ಕೆಳಕಂಡ ಸ್ಥಳಗಳಲ್ಲಿ ಪಡೆದು ಭರ್ತಿ ಮಾಡಿ, ಆರಂಭಿಕ ಠೇವಣಿಯೊಂದಿಗೆ ಅರ್ಜಿಗಳನ್ನು ಸಲ್ಲಿಸಿ ನೋಂದಾಯಿಸಿಕೊಳ್ಳಬಹುದಾಗಿರುತ್ತದೆ.

ಅ. ಕರ್ನಾಟಕ ಗೃಹ ಮಂಡಳಿ, ಕೇಂದ್ರ ಕಛೇರಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು.
ಆ. ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕರ್ನಾಟಕ ಗೃಹ ಮಂಡಳಿ, ಸೂರ್ಯನಗರ 1 & 2ನೇ ಹಂತ, ಆನೇಕಲ್ ಮುಖ್ಯ ರಸ್ತೆ, ಬೆಂಗಳೂರು –560 081.
ಇ. ಕಾರ್ಪೋರೇಷನ್ ಬ್ಯಾಂಕ್, ಚಂದಾಪುರ ಶಾಖೆ, ಬೆಂಗಳೂರು.

| ಮನೆಯ ವರ್ಗ | ಕಟ್ಟಡದ ವಿಸ್ತೀರ್ಣ (ಚ.ಮೀ. ಗಳಲ್ಲಿ) | ಪ್ರತಿ ಮನೆಯ ಅಂದಾಜು ಮೊತ್ತ (ರೂ.ಗಳಲ್ಲಿ) | ಬೇಡಿಕೆ ಸಮೀಕ್ಷೆ ಅರ್ಜಿಯೊಂದಿಗೆ ಪಾವತಿಸಬೇಕಾಗಿರುವ ಆರಂಭಿಕ ಠೇವಣಿ (ರೂ.ಗಳಲ್ಲಿ) | ನೋಂದಣಿ ಶುಲ್ಕ (ರೂ. ಗಳಲ್ಲಿ) | ಅರ್ಜಿಗಳ ವಿತರಣೆಗೆ ಪ್ರಾರಂಭ ದಿನಾಂಕ | ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ |
|---|---|---|---|---|---|---|
| LIG (2 BHK) | 45 ರಿಂದ 50 ಚ.ಮೀ. | 16.00 ಲಕ್ಷ | 10,000.00 | 1,000.00 | 02.03.2020 | 03.04.2020 |

**ಷರತ್ತು ಮತ್ತು ನಿಬಂಧನೆಗಳು:**

1. ಈ ಅಧಿಕೃತ ಪ್ರಕಟಣೆಯನ್ನು ನಿಖರ ಬೇಡಿಕೆ ಸಮೀಕ್ಷೆಗಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಕಟಿಸಲಾಗಿದೆ.
2. ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿಯ ಒಟ್ಟು ಮೊತ್ತ ರೂ.11,000/– (10,000+1000)ಗಳ ಹಣವನ್ನು "Housing Commissioner, KHB, Bangalore" ಇವರ ಹೆಸರಿನಲ್ಲಿ ಡಿ.ಡಿ. ಪಡೆದು ಭರ್ತಿ ಮಾಡಿದ ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.
3. ಮನೆಗಳನ್ನು ಪ್ರವರ್ಗಗಳಲ್ಲಿ ಮೀಸಲಾತಿಯನ್ವಯ ಕಾಯ್ದಿರಿಸಿ ಹಂಚಿಕೆ ಮಾಡಲಾಗುವುದು.
4. ಆಯಾ ಪ್ರವರ್ಗವಾರು ಅಡಿಯಲ್ಲಿ ಮೀಸಲಾತಿ ಕೋರಿ ಅರ್ಜಿ ಸಲ್ಲಿಸುವವರು (SC, ST, BT, Def, Ex-Ser, Cen. Govt., State Govt., Senior Ctzn, Phy.H etc.) ಸಂಬಂಧಿಸಿದ ದೃಢೀಕೃತ ದಾಖಲಾತಿಯನ್ನು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸುವುದು.
5. ಮನೆಗಳನ್ನು ಒಂದೇ ಇಡಿಗಂಟಿನ (Outright Sale) ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು.
6. ಅರ್ಜಿ ಸಲ್ಲಿಸುವುದಕ್ಕೆ ಮೊದಲು 10 ವರ್ಷಗಳಿಗೆ ಕಡಿಮೆ ಇಲ್ಲದಷ್ಟು ಕಾಲ ಅರ್ಜಿದಾರರು ಕರ್ನಾಟಕ ರಾಜ್ಯದಲ್ಲಿ ಸಾಮಾನ್ಯ ನಿವಾಸಿಯಾಗಿರಬೇಕು.
7. ಅರ್ಜಿದಾರರು ಕರ್ನಾಟಕ ಗೃಹ ಮಂಡಳಿ ಅಥವಾ ಯಾವುದೇ ಸ್ಥಳೀಯ ಸಂಸ್ಥೆ/ಪ್ರಾಧಿಕಾರದಿಂದ ಈ ಹಿಂದೆ ಮನೆ/ನಿವೇಶನ ಪಡೆದಿರುವುದಿಲ್ಲವೆಂದು ನೋಟರಿ ಮೂಲಕ ಪ್ರಮಾಣೀಕರಿಸಿ ಪ್ರಮಾಣ ಪತ್ರ (Notary Affidavit) ಸಲ್ಲಿಸಬೇಕು.
8. ಮನೆಗಳ ಹಂಚಿಕೆಗಾಗಿ ಅರ್ಜಿ ಸಲ್ಲಿಸಿ ನೋಂದಣಿ ಪಡೆದ ಅರ್ಜಿದಾರರಿಗೆ ನೋಂದಣಿ ಶುಲ್ಕವನ್ನು ಮರುಪಾವತಿ ಮಾಡಲಾಗುವುದಿಲ್ಲ.
9. ಬೇಡಿಕೆ ಸಮೀಕ್ಷೆಯಲ್ಲಿ ಉತ್ತಮ ಬೇಡಿಕೆ ಬಂದಲ್ಲಿ ಮಾತ್ರ ಸದರಿ ಯೋಜನೆಯನ್ನು ಕೈಗೊಳ್ಳಲಾಗುವುದು. ಇಲ್ಲವಾದಲ್ಲಿ ಅರ್ಜಿದಾರರು ಪಾವತಿಸುವ ನೋಂದಣಿ ಶುಲ್ಕವನ್ನು ಉಳಿಸಿಕೊಂಡು ಆರಂಭಿಕ ಠೇವಣಿಯನ್ನು ಮರುಪಾವತಿಸಲಾಗುವುದು.
10. ಕರ್ನಾಟಕ ಗೃಹ ಮಂಡಳಿ 1983ರ ಹಂಚಿಕೆ ನಿಯಮಾವಳಿ ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
11. ಸಾರ್ವಜನಿಕ/ಕಂಪ್ಯೂಟರ್ ಲಾಟರಿ ಪ್ರಕ್ರಿಯೆ ನಡೆಸುವ ಮೂಲಕ ಮನೆಗಳ ಹಂಚಿಕೆಯನ್ನು ಮಾಡಲಾಗುವುದು ಹಾಗೂ ಸದರಿ ಹಂಚಿಕೆಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕರ್ನಾಟಕ ಗೃಹ ಮಂಡಳಿಯು ಕಾಯ್ದಿರಿಸಿಕೊಂಡಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ www.karnatakahousing.com ಹಾಗೂ ಸೂರ್ಯನಗರ ಕಛೇರಿ ದೂರವಾಣಿ ಸಂಖ್ಯೆ: 080–29600401/402 ಮೊಬೈಲ್ ಸಂ. 9886647084, 9448431867, 8722925429, 9901363938 ಸಂಪರ್ಕಿಸಬಹುದು. (ಕಛೇರಿ ವೇಳೆಯಲ್ಲಿ ಮಾತ್ರ)

ಸಹಿ/–
ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ,
ಸೂರ್ಯನಗರ ಸಮನ್ವಯ ಕಛೇರಿ–1, ಬೆಂಗಳೂರು.

Scanned with CamScanner